ಹೊಸಕೋಟೆ, ಮಾಲೂರು, ಹೊಸೂರು ರಸ್ತೆಯಂ ಮೇಲೆ ಅಧಿಕ ವಾಹನಗಳ ಒತ್ತಡ

೨೨೬. ಶ್ರೀ ಎ. ನಾಗರಾಜು (ಮಾಲೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸಕೋಟೆ, ಮಾಲೂರು, ಹೊಸೂರು ರಸ್ತೆಯ ಮೇಲೆ ಅಧಿಕ ವಾಹನ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಆ) ಸರ್ಕಾರದ ವತಿಂದ ಪ್ರಸ್ತುತ ಏಕ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ಬಗ್ಗೆ ಏನಾದರೂ ಪ್ರಸ್ತಾವನೆಯು ಇದೆಯೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ವಾಹನಗಳ ಸಂಚಾರ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದು.

ಆ) ಸದ್ಯದಲ್ಲಿ ಸರ್ಕಾರದ ವತಿಂದ ಇಂತಹ ಪ್ರಸ್ತಾವನೆ ಇರುವುದಿಲ್ಲ.